672(1586) ಶ್ರೀ ಡಾ. ಅನ್ನದಾನಿ ಕೆ. (ಮಳವಳ್ಳಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವನಸಮುದ್ರ ಪ್ರದೇಶದಲ್ಲಿ ಖಾಸಗಿ ಕಂಪನಿಗಳಿಗೆ ಜಲ ವಿದ್ಯುತ್ ಘಟಕವನ್ನು ಸ್ಥಾಪಿಸಲು ಅನುಮತಿ ನೀಡಿರುವುದು ನಿಜವೆ?

ಆ) ಸದರಿ ಯೋಜನೆಯ ಕಾಮಗಾರಿ ಆರಂಭಗೊಂಡಿರುವುದು ನಿಜವಾಗಿದ್ದಲ್ಲಿ ಯೋಜನೆಯ ರೂಪು-ರೇಷೆಗಳು ಏನು?

ಇ) ಇದರಿಂದಾಗಿ ರಮಣೀಯ ಜಲಪಾತ ಗಗನಚುಕ್ಕಿ-ಭರಚುಕ್ಕಿ ಜಲಪಾತ ಕಣ್ಮರೆಯಾಗುವ ವರದಿಗಳ ಕುರಿತು ಸರಕಾರದ ಸ್ಪಷ್ಟೀಕರಣಗಳೇನು?

ಈ) ಈ ಕುರಿತಂತೆ ಸರ್ಕಾರ ಸಮಗ್ರ ಪರಿಶೀಲನೆ ನಡೆಸಿ ಅನುಮತಿ ನೀಡಿದೆಯೇ: ಹೌದಾದಲ್ಲಿ ಅನುಮತಿಯ ವಿವರಗಳೇನು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು, ನಿಜ

ಆ) ಸದರಿ ಯೋಜನೆಯ ಕಾಮಗಾರಿ ಆರಂಭಗೊಂಡಿರುವುದು ನಿಜ. ಯೋಜನೆಗಳ ರೂಪುರೇಷೆಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಈ ಯೋಜನೆಯನ್ನು ಸರ್ಕಾರದ ಆದೇಶ ಸಂಖ್ಯೆ ಇಂಇ 341 ಎನ್.ಸಿ.ಇ 2004 ದಿನಾಂಕ 20.12.2004 ರನ್ವಯ **"ಐತಿಹಾಸಿಕ ಜಲಪಾತದ ಶಿವನ ಸಮುದ್ರಂ ಜಲಪಾತದ ಸೌಂದರ್ಯಕ್ಕೆ ಹಾಗೂ ಕೆಳತೊರೆಯಲ್ಲಿ ಹಂಚಿಕೆಯಾಗಿರುವ ಯೋಜನೆಗಳಿಗೆ ಯಾವುದೇ ತರಹದ ಕುಂದಾಗಕೂಡದು ಹಾಗೂ ಧಕ್ಕೆಯಾಗಕೂಡದು"** ಎಂಬ ಷರತ್ತುಗಳನ್ನೊಳಗೊಂಡಂತೆ ಹಂಚಿಕೆ ಮಾಡಲಾಗಿದೆ. ಈ ಯೋಜನೆಗೆ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ, ನೀರಾವರಿ ಇಲಾಖೆಗಳಿಂದ ನಿರಾಪೇಕ್ಷಣೆ ಪತ್ರ ದೊರಕಿದೆ. ಕೆ.ಆರ್.ಇ.ಡಿ.ಎಲ್ ಸಂಸ್ಥೆಯಿಂದ ಈ ಯೋಜನೆಯ ವಿವರವಾದ ವರದಿಗೆ ನೀಡಿದ ತಾಂತ್ರಿಕ ಅನುಮೋದನೆಯಲ್ಲಿ ಈ ಕುರಿತಂತೆ ಷರತ್ತುಗಳನ್ನು ಅಳವಡಿಸಲಾಗಿದೆ. ಆದ್ದರಿಂದ ರಮಣೀಯ ಜಲಪಾತ ಗಗನ ಚುಕ್ಕಿ ಭರಚುಕ್ಕಿ ಜಲಪಾತ ಕಣ್ಮರೆಯಾಗುವ ಸಾಧ್ಯತೆಗಳಿಲ್ಲ. ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಹೌದು. ಈ ಕುರಿತಂತೆ ಪರಿಶೀಲನೆ ಪಡೆಸಿ ಅನುಮತಿ ನೀಡಲಾಗಿದೆ. ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಮೆll ಪಯೋನೀರ್ ಪವರ್ ಕಾರ್ಪೊರೇಷನ್ ಲಿ., ಅವರಿಗೆ ರಂಗನಾಥಸ್ವಾಮಿ ದೇವಸ್ಥಾನದ ಬಳಿ ಕಾವೇರಿ ನದಿಗೆ ಅಡ್ಡಲಾಗಿ 24.75 ಮೆ.ವ್ಯಾ ಸಾಮರ್ಥ್ಯದ ಕಿರುಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿದೆ. ಈ ಸ್ಥಳದಲ್ಲಿ ನೀರಿನ ಹರಿವು ವರ್ಷದಲ್ಲಿ 6 ತಿಂಗಳುಗಳ ವರೆಗೂ 100 ಕ್ಯೂಸೆಕ್ಸ್ ಗಿಂತ ಹೆಚ್ಚಿಗೆ ಇರುವುದರಿಂದ ಹಾಗೂ ಯೋಜನೆಗೆ ಕೇವಲ 27.6 ಕ್ಯೂಸೆಕ್ಸ್ ಬಳಸಿಕೊಳ್ಳುವುದರಿಂದ ಕೆಳತೊರೆಯಲ್ಲಿರುವ ಶಿವನಸಮುದ್ರಂ ಜಲಪಾತ ಸೌಂದರ್ಯಕ್ಕೆ ಧಕ್ಕೆಯಾಗುವುದಿಲ್ಲವೆಂಬುದನ್ನು ಮನಗಂಡು **"ಐತಿಹಾಸಿಕ ಜಲಪಾತವಾದ ಶಿವನ ಸಮುದ್ರಂ ಜಲಪಾತದ ಸೌಂದರ್ಯಕ್ಕೆ ಹಾಗೂ ಕೆಳತೊರೆಯಲ್ಲಿ ಹಂಚಿಕೆಯಾಗಿರುವ ಯೋಜನೆಗಳಿಗೆ ಯಾವುದೇ ತಹರಹ ಕುಂದಾಗಕೂಡದು ಹಾಗೂ ದಕ್ಕೆಯಾಗಕೂಡದು"** ಎಂಬ

ಷರತ್ತುಗಳನ್ನೊಳಗೊಂಡು ಸರ್ಕಾರದ ಆದೇಶ ಸಂಖ್ಯೆ ಎಂಇ 341 ಎನ್.ಸಿ.ಇ 2004 ದಿನಾಂಕ 20.12.2004 ರನ್ವಯ 24.75 ಮೆ.ವ್ಯಾಗೆ ಅನುಮತಿ ನೀಡಲಾಗಿದೆ. ವಿವರವಾದ ಯೋಜನಾ ವರದಿಯ ಪ್ರಕಾರ ಈ ಯೋಜನೆಗೆ ಈಗಾಗಲೇ ಇರುವ ಶಿವಾ ಆಣೆಕಟ್ಟಿನಿಂದ 400 ಮೀ ಕೆಳತೊರೆಯಲ್ಲಿ ಇನ್ನೊಂದು ಚಿಕ್ಕ ತಿರುವುನಾಲೆಯನ್ನು ನಿರ್ಮಿಸಿ ಗರಿಷ್ಠ 27.6 ಕ್ಯೂಸೆಕ್ಸ್ ನೀರನ್ನು 4 ಕಿ.ಮೀ ಉದ್ದದ ಕೆನಾಲ್ (3.7 ಕಿಮೀ ಪವರ್ ಕೆನಾಲ್ ಅಂಡ್ 300 ಮೀ ಪೆನ್ ಸ್ಟಾಕ್) ಮುಖಾಂತರ ತೆಗೆದುಕೊಂಡು ವಿದ್ಯುತ್ ಉತ್ಪಾದನೆ ಮಾಡಿಮರಳಿ ಟೇಲ್ ರೇಸ್ ಮುಖಾಂತರ ನದಿಗೆ ಬಿಡಲಾಗುವುದು. ಈ ಯೋಜನೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ನೀರಾವರಿ ಇಲಾಖೆಗಳಿಂದ ನಿರಾಪೇಕ್ಷಣೆ ಪತ್ರ ದೊರಕಿದೆ, ಹಾಗೂ ಕೆ.ಆರ್.ಇ.ಡಿ.ಎಲ್ ಸಂಸ್ಥೆಯಿಂದ ಈ ವಿವರವಾದ ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ನೀಡಿದ ಪತ್ರದಲ್ಲಿ ಐತಿಹಾಸಿಕ ಜಲಪಾತದ ಸೌಂದರ್ಯಕ್ಕೆ ಯಾವುದೇ ಧಕ್ಕೆಯಾಗದಂತೆ ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಕೆಳಕಂಡ ಷರತ್ತುಗಳನ್ನು ವಿಧಿಸಲಾಗಿದೆ.

* ಈ ಯೋಜನೆಯಿಂದ ಐತಿಹಾಸಿಕ ಜಲಪಾತದ ಸೌಂದರ್ಯಕ್ಕೆ ಕುಂದುಬರದಂತೆ ಯಾವುದೇ ಕಾರಣಕ್ಕೂ ಕನಿಷ್ಠ 10 ಕ್ಯೂಸೆಕ್ಸ್ ನೀರನ್ನು ಜಲಪಾತಕ್ಕೆ ಬಿಡಲೇಬೇಕು ಎಂಬ ಷರತ್ತನ್ನು ವಿಧಿಸಲಾಗಿದೆ (ಈ ನೀರಿನ ಪ್ರಮಾಣವನ್ನು ಕೆ.ಪಿ.ಸಿ.ಎಲ್‌ನ ಶರಾವತಿ ಜಲವಿದ್ಯುತ್ ಯೋಜನೆಗಾಗಿ ಉಪಯೋಗಿಸಿಕೊಂಡಿರುವ ಜೋಗ ಜಲಪಾತದ ಅನುಸರಣೆ ಮಾಡಿ ಈ ನಿರ್ಧಾರ ಕೈಗೊಳ್ಳಲಾಗಿದೆ).

* ಈ ಯೋಜನೆಗಾಗಿ ನದಿಯಲ್ಲಿ ನೀರಿರುವಾಗ 13.5 ಕ್ಯೂಸೆಕ್ಸ್ ನೀರನ್ನು ಜಲಪಾತದ ಸೌಂದರ್ಯ ಕಾಯ್ದುಕೊಳ್ಳಲು ನೀರು ಬಿಟ್ಟು, ನಂತರ ಕೆಳಗಿನ ಪಟ್ಟಿಯಲ್ಲಿ ನಮೂದಿಸಿರುವಷ್ಟೇ ನೀರನ್ನು ಉಪಯೋಗಿಸಿಕೊಳ್ಳಬೇಕೆಂದು ಷರತ್ತನ್ನು ವಿಧಿಸಲಾಗಿದೆ.

Total flow in the river Q_{total} (m^3/Sec)	Mandatory river lease $Q_{release}$ (m^3/Sec)	Maximum Permissible flow through TG units $Q_{TG\ units}$ (m^3/Sec)
Upto 13.5	Full	Nil
13.5	10.0	3.5
20	10	10
30	15	15
40	20	20
50	25	25
60	32.4	27.6
>60	$Q_{release}$ - 27.6	27.6.Maximum

* ಗರಿಷ್ಠ 27.6 ಕ್ಯೂಸೆಕ್ಸ್ ನೀರನ್ನು ಮಾತ್ರ ಅಭಿವೃದ್ದಿದಾರರು ಉಪಯೋಗಿಸಿಕೊಳ್ಳಬೇಕೆಂದು ಈ ಕುರಿತಂತೆ ರಚಿಸಿದ ತಾಂತ್ರಿಕ ನಕ್ಷೆಗಳಿಗೆ ಅನುಮೋದನೆ ನೀಡಿದೆ.

* ಅದೂ ಅಲ್ಲದೇ State water policy ಯ ಆದ್ಯತೆಗಳನ್ನು ಗಮನದಲ್ಲಿರಿಸಿಕೊಂಡು ಯೋಜನೆಗೆ ಅನುಮತಿ ನೀಡಲಾಗಿದೆ.

674(1343) ಶ್ರೀ (ಅಪ್ಪಾಜಿ) ಚನ್ನಬಸವರಾಜ್ ಶಂಕರ್‌ರಾವ್ ನಾಡಗೌಡರ್ (ಮುದ್ದೇಬಿಹಾಳ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುದ್ದೇಬಿಹಾಳ ತಾಲ್ಲೂಕು ತಾಳಿಕೋಟೆ – ಪಿರಾಪುರ್ ಮಾರ್ಗವಾಗಿ ಕೆಂಬಾವಿಗೆ ಹೋಗುವ ರಸ್ತೆ ಸಂಪೂರ್ಣ ದುರಸ್ಥಿಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಈ ರಸ್ತೆಯ ದುರಸ್ತಿಗೆ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು ಬಂದಿದೆ.

ಆ) ಸದರಿ ರಸ್ತೆಯು ಹುನಗುಂದ ಸುರಪುರ ರಾಜ್ಯ ಹೆದ್ದಾರಿ ಸಂ:60 ರ ಭಾಗವಾಗಿದೆ. ಈ ರಸ್ತೆಯನ್ನು ಇತ್ತೀಚೆಗೆ ರಾ.ಹೆ.ಎಂದು ಮೇಲ್ದರ್ಜೆಗೇರಿಸಲಾಗಿದೆ. ಒಟ್ಟು:44.0 ಕಿಮೀ ಪೈಕಿ 2.10 ರಸ್ತೆ ಸುಧಾರಣೆಗಾಗಿ 2004–05 ನೇ ಸಾಲಿಗೆ ರೂ.18.00 ಲಕ್ಷಗಳ ಅನುದಾನ ಬಿಡುಗಡೆಯಾಗಿದೆ. ಗುತ್ತಿಗೆ ಪ್ರಕ್ರಿಯೆ ಜಾರಿಯಲ್ಲಿದ್ದು ಕಾಮಗಾರಿಯನ್ನು ಮಾರ್ಚ್ 2005 ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

ಸದರಿ ರಸ್ತೆಯನ್ನು 2005 ರಿಂದ 2008 ರವರೆಗೆ 3 ವರ್ಷಗಳ ನಿರ್ವಹಣೆ ಅಡಿಯಲ್ಲಿ ಕೆಆರ್‌ಡಿಸಿಎಲ್ ನಿಂದ ರೂ. 135.0 ಲಕ್ಷಗಳ ಅಂದಾಜು ಮೊತ್ತದಲ್ಲಿ ನಿರ್ವಹಣೆ ಮಾಡಲು ಯೋಜಿಸಲಾಗಿದೆ.

675(1344) ಶ್ರೀ (ಅಪ್ಪಾಜಿ) ಚನ್ನಬಸವರಾಜ್ ಶಂಕರ್‌ರಾವ್ ನಾಡಗೌಡರ್ (ಮುದ್ದೇಬಿಹಾಳ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಮಿನಿ ವಿಧಾನ ಸೌಧ ನಿರ್ಮಾಣ ಮಾಡುವ ಆಲೋಚನೆ ಸರ್ಕಾರಕ್ಕಿದೆಯೇ

ಆ) ಈಗಾಗಲೇ ನಡೆಯುತ್ತಿರುವ ವಿವಿಧ ಇಲಾಖೆಯ ಕಛೇರಿಗಳು ಗ್ರಾಮದ ಪುರಾತನ ಒಂದು ಚಿಕ್ಕದಾದ ಹಂಚಿನ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಇ) ಈ ಬಗ್ಗೆ ಸರ್ಕಾರಕ್ಕೆ ಹಲವಾರು ಬಾರಿ ಪ್ರಸ್ತಾವನೆ ಸಲ್ಲಿಸಿದ್ದರು ಸಹ ಇಲ್ಲಿಯವರೆಗೂ ಯಾವುದೇ ಕ್ರಮವನ್ನು ಕೈಗೊಳ್ಳದಿರಲು ಕಾರಣವೇನು (ವಿವರಗಳನ್ನು ನೀಡುವುದು)?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಮುದ್ದೇಬಿಹಾಳ ತಾಲ್ಲೂಕು ಸೇರಿದಂತೆ ರಾಜ್ಯದ 86 ತಾಲ್ಲೂಕುಗಳಲ್ಲಿ ಮಿನಿ ವಿಧಾನ ಸೌಧದ ನಿರ್ಮಾಣದ ಪ್ರಕ್ರಿಯೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ತಾಲ್ಲೂಕಿನ ಇಲಾಖೆಯ ಕಾರ್ಯಾಲಯಗಳು ಬೇರ ಬೇರೆ ಕಟ್ಟಡಗಳಲ್ಲಿ ನಿರ್ವಹಿಸುತ್ತಿವೆ.

ಇ) ಈ ಕಟ್ಟಡದ ನಿರ್ಮಾಣಕ್ಕಾಗಿ ಸೂಕ್ತ ನಿವೇಶನ ಪಡೆಯುವ ಪ್ರಯತ್ನ ಜಾರಿಯಲ್ಲಿದೆ.